**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**
**ಸಿ.ಸಿ.ನಂ. 3236/2023**

ದಿನಾಂಕಃ **26.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು | ಓಂಕಾರಪ್ಪ ಕೆ ಟಿ | ಚಾಸಾ-2, ಪ್ರಾಸ-1 |
| ತಂದೆಯ ಹೆಸರು | ತಿಮ್ಮಪ್ಪ | |
| ವಯಸ್ಸು | 50 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಕೆದಿಗೆರೆ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-1 ನನಗೆ ಗೊತ್ತಿಲ್ಲ. ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲಾ. ಪೋಲಿಸರು ನನಗೆ ನೋಟಿಸು ನೀಡಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮಹಜರ್ ಕ್ರಮ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುವನ್ನು ವಶಪಡಿಸಿಕೊಂಡಿರುವುದಿಲ್ಲ. ಈ ಸಂಬಂಧ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ದಿಃ 29.03.2023 ರ ಪೋಲಿಸ್ ನೋಟಿಸಿನಲ್ಲಿ ತನ್ನ ಸಹಿ ನೋಡಿ ಗುರುಸಿತಿರುತ್ತಾರೆ. ಸದರಿ ನೋಟಿಸನ್ನು ನಿಪಿ-1 ರಲ್ಲಿರುವ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ರಲ್ಲಿರುವ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಯಾವಾಗ ಮತ್ತು ಎಲ್ಲಿ ಹಾಕಿರುತ್ತೇನೆ ಎಂದು ಗೊತ್ತಿಲ್ಲ. ನನ್ನೊಂದಿಗೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ತಿಳಿದಿಲ್ಲ. ಸಾಕ್ಷಿಗೆ ಮಹಜರ್ ಸಮಯದಲ್ಲಿ ತೆಗೆಯಲಾದ ಛಾಯಾಚಿತ್ರವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ. ಸದರಿ ಛಾಯಾಚಿತ್ರವನ್ನು ನಿಪಿ-3 ಎಂದು ಗುರುತಿಸಲಾಯಿತು. ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಬಿಳಿ ಬಣ್ಣದ ಚೀಲವನ್ನು ತೋರಿಸಲಾಗಿ ಅದಕ್ಕೆ ಅಂಟಿಸಿರುವ ಚೀಟಿಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ. ಸದರಿ ಚೀಲವನ್ನು ಮುಮಾ-1 ಎಂದು, ಸಾಕ್ಷಿ ಸಹಿಯನ್ನು ಮುಮಾ-1(ಎ) ಎಂದು ಗುರುತಿಸಲಾಯಿತು. ಅದನ್ನು ಎಲ್ಲಿಂದ ಮತ್ತು ಯಾವಾಗ ವಶಪಡಿಸಿಕೊಳ್ಳಲಾಯಿತು ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ದಿಃ 29.03.2023 ರಂದು ನನಗೆ ನಿಪಿ-1 ರಂತೆ ನೋಟಿಸು ಜಾರಿ ಮಾಡಿರುವುದಿಲ್ಲ. ಅದೇ ದಿನ ರಾತ್ರಿ 8.15 ರಿಂದ 9.30 ರವರೆಗೆ ನನ್ನ ಮತ್ತು ಚಾಸಾ-1 ರವರ ಸಮಕ್ಷಮ ನಿಪಿ-2 ರಂತೆ ಮಹಜರ್ ಕ್ರಮ ಜರುಗಿಸಿ 90 ಎಂಎಲ್ ನ 80 ರಾಜಾವಿಸ್ಕಿ ಪೌಚುಗಳು ಹಾಗೂ ಕೆಎ-18 ಕೆ-2597 ರ ಟಿವಿಎಸ್ ಎಕ್ಸ್ಎಲ್ ವಾಹನವನ್ನು ವಶಪಡಿಸಿಕೊಂಡಿರುವುದಿಲ್ಲ. ಅದೇ ಸಮಯದಲ್ಲಿ ನಿಪಿ-3 ರಂತೆ ಛಾಯಾಚಿತ್ರ ತೆಗೆಸಿರುವುದಿಲ್ಲ. ಈ ಸಂಬಂಧ ನಾನು ದಿಃ 04.04.2023 ರಂದು ನನಗೆ ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದ ಃಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.